

# ರಾಜೀವ ತಾರಾನಾಥ

# ನಾದದ ನವನೀತ

ಹಿಂದೂಸ್ತಾನಿ ಸಂಗೀತದ 'ಮನೆಗಳೇ ಇಲ್ಲದ ತಂತಿ ವಾದ್ಯ'ದ ಮೂಲಕ ಸಂಗೀತಪ್ರಿಯರ ಮನಸ್ಸುಗಳನ್ನು ಗೆದ್ದ ಸಂಗೀತ ದಿಗ್ಗಜ ಪಂ. ರಾಜೀವ ತಾರಾನಾಥ್‌ ಸಂಗೀತ, ರಾಗ, ನುಡಿಸಾಣಿಕೆಯಲ್ಲಿ ಅಗಾಧವಾದ ಪಾಂಡಿತ್ಯ ಹೊಂದಿದ್ದ ಈ ಸಾಧಕ ನಾದಲೋಕದಿಂದ ವಿರಮಿಸಿದ್ದಾರೆ.

■ ಉಮಾ ಅನಂತ್

ಸಂಗೀತದಲ್ಲಿ ದೊಡ್ಡ ಹೆಸರು ಮಾಡಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಜ್ಜೆಗುರುತು ಮೂಡಿಸಬೇಕಾದರೆ ಚಿಕ್ಕಂದಿನಲ್ಲೇ ಸ್ವರ ಸಾಧನೆ ಮಾಡಲೇಬೇಕೆಂದಿಲ್ಲ ಎಂಬುದನ್ನು ಸಾಬೀತುಪಡಿಸಿದವರು ಸರೋದ್ ದಿಗ್ಗಜ ಪಂ. ರಾಜೀವ ತಾರಾನಾಥ್. ಶಾಸ್ತ್ರೀಯ ಸಂಗೀತದ ಬಗ್ಗೆ ಅಪಾರ ಒಲವಿದ್ದು, ಗಾಯನ, ತಬಲಾ ವಾದನಗಳಲ್ಲಿ ಹಿಡಿತ ಸಾಧಿಸಿದ್ದರೂ ಪಂ. ರಾಜೀವ ತಾರಾನಾಥ್ ಸರೋದ್ ವಾದ್ಯದತ್ತ ಆಕರ್ಷಿತರಾದದ್ದು ಅವರ 26ನೇ ವಯಸ್ಸಿನಲ್ಲಿ. ಅದೂ ಅತ್ಯಂತ ಆಕಸ್ಮಿಕವಾಗಿ.

ಅದು 1953ನೇ ಇಸವಿ. ಬೆಂಗಳೂರಿನ ಪುರಭವನದಲ್ಲಿ ಸರೋದ್ ಮಾಂತ್ರಿಕ ಉಸ್ತಾದ್ ಅಲಿ ಅಕ್ಬರ್ ಖಾನ್ (ಇವರ ಸರೋದ್ ಗುರು) ಹಾಗೂ ಸಿತಾರ್ ದಿಗ್ಗಜ ಪಂ. ರವಿಶಂಕರ್ ಅವರ ಸರೋದ್–ಸಿತಾರ್ ಜುಗಲಬಂದಿ. ಈ ಕಛೇರಿಗೆ ರಾಜೀವ ತಾರಾನಾಥ್ ಹೋಗಿ ಇಡೀ ಕಾರ್ಯಕ್ರಮ ಆಸ್ವಾದಿಸಿದ್ದರು. ಆಗಲೇ ಅವರು ಸರೋದ್ ಕಲಿಯಲೇಬೇಕು, ಅದೂ ಅಲಿ ಅಕ್ಬರ್ ಖಾನ್ ಅವರಿಂದಲೇ ಎಂದು ನಿರ್ಧಾರ ಮಾಡಿದ್ದರು. 'ಈ ಜುಗಲಬಂದಿ ನನ್ನನ್ನು ಸಂಗೀತ ಲೋಕದ ಹುಚ್ಚನನ್ನಾಗಿಸಿತು' ಎಂದು ಅವರೇ ಹೇಳಿಕೊಂಡಿದ್ದರು. ತಾವು ಅಂದುಕೊಂಡದ್ದನ್ನು ಸಾಧಿಸಿಯೂ ಬಿಟ್ಟರು. ನುಡಿಸಾಣಿಕೆಯಲ್ಲಿ ತ್ರಿವಿಕ್ರಮ ಸಾಧನೆ ಮಾಡಿದರು. ದೇಶ ವಿದೇಶಗಳಲ್ಲಿ ಸಾವಿರಾರು ಸರೋದ್ ಕಛೇರಿ ನೀಡಿ ಘನ ವಿದ್ವಾಂಸರೆನಿಸಿಕೊಂಡರು.

ಆಸ್ಟ್ರೇಲಿಯಾದ ಸಿಡ್ನಿಯಲ್ಲಿರುವ ಒಪೆರಾ ಹೌಸ್‌ನಲ್ಲಿ ಸರೋದ್ ಕಛೇರಿ ನೀಡಿದ ಮೊದಲ ಭಾರತೀಯ ವಾದಕ ಎಂಬ ಅಗ್ಗಳಿಕೆ ಇವರದು. ಇದೇ ಒಪೆರಾ ಹೌಸ್‌ನಲ್ಲಿ ಇವರು ಸರೋದ್ ನುಡಿಸಿದ ಛಾಯಾಚಿತ್ರವನ್ನೂ ಗೋಡೆಗೆ ಹಾಕಲಾಗಿದ್ದು, ಒಬ್ಬ ಭಾರತೀಯ ಸಂಗೀತಗಾರನಿಗೆ ಸಿಕ್ಕ ಬಹುದೊಡ್ಡ ಗೌರವವೂ ಹೌದು.